ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 24-09-1992.

# *ಸತ್ಯತೆ ಹಾಗೂ ಅಸತ್ಯತೆಯ ವಿಶೇಷ ಅಂತರ*

(सत्य और असत्य का विशेष अन्तर)

**ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಸ್ನೇಹದಲ್ಲಿ ಲೀನವಾಗಿರುವ ಸರ್ವ ಶ್ರೇಷ್ಠ ಆತ್ಮರಿಗೆ ಯಥಾರ್ಥ ಸತ್ಯದ ಪರಿಚಯವನ್ನು ಕೊಡುತ್ತಾ ಅವ್ಯಕ್ತ ಬಾಪ್‌ದಾದಾ ಮಾತನಾಡುತ್ತಿದ್ದಾರೆ.**

ಇಂದು ಹೃದಯರಾಮ(ಮನೋಭಿರಾಮ) ತಂದೆ ತನ್ನ ಸರ್ವಮಕ್ಕಳ ಹೃದಯದ ಆಸೆಯನ್ನು ಪೂರ್ಣ ಮಾಡುವುದಕ್ಕಾಗಿ ಮಿಲನ ಮಾಡಲು ಬಂದಿದ್ದಾರೆ. ಅವ್ಯಕ್ತ ರೂಪದಲ್ಲಂತೂ ಎಲ್ಲಾ ಮಕ್ಕಳು ಸದಾ ಮಿಲನ ಮಾಡುತ್ತಲೇ ಇರುತ್ತೀರಿ ಆದರೂ ವ್ಯಕ್ತಶರೀರದ ಮೂಲಕ ಅವ್ಯಕ್ತ ಮಿಲನವನ್ನಾಚರಿಸುವ ಶುಭಆಸೆಯನ್ನು ಇಟ್ಟುಕೊಳ್ಳುತ್ತೀರಿ ಆದ್ದರಿಂದ ತಂದೆಯೂ ಸಹ ಅವ್ಯಕ್ತದಿಂದ ವ್ಯಕ್ತದಲ್ಲಿ ಬರಬೇಕಾಗುತ್ತದೆ. ಬಾಪ್‌ದಾದಾ ಈ ಸಮಯದಲ್ಲಿ ನಾಲ್ಕಾರುಕಡೆಯ ಈಶ-ವಿದೇಶದ ಮಕ್ಕಳನ್ನು ಯಾರು ಮನಸ್ಸಿನಿಂದ ಮಧುಬನದಲ್ಲಿದ್ದಾರೆಯೋ ಅಂತಹ ಮಕ್ಕಳನ್ನು ನೋಡುತ್ತಿದ್ದೇವೆ. ತಾವು ಸಾಕಾರದಲ್ಲಿದ್ದೀರಿ ಮತ್ತು ಅನೇಕ ಮಕ್ಕಳು ಅವ್ಯಕ್ತರೂಪದಿಂದ ಮಿಲನ ಮಾಡುತ್ತಿದ್ದಾರೆ. ಬಾಪ್‌ದಾದಾರವರೂ ಸಹ

ಸರ್ವಮಕ್ಕಳಿಗೆ ಸ್ನೇಹದ ರಿಟರ್ನ್ ಕೊಡುತ್ತಿದ್ದೇವೆ. ಎಲ್ಲಿಯೇ ಇರಲಿ ನೆನಪಿನ ಮೂಲಕ ತಂದೆಯ ಸಮೀಪ ಹೃದಯದಲ್ಲಿದ್ದೀರಿ. ಎಲ್ಲರ ಸ್ನೇಹದ ಸಂಗೀತವನ್ನು ಬಾಪ್‌ದಾದಾ ಕೇಳಿಸಿಕೊಳ್ಳುತ್ತಿದ್ದೇವೆ. ತಂದೆಗೆ ಗೊತ್ತಿದೆ. ಮಕ್ಕಳಿಗಾಗಿ ತಂದೆಯ ವಿನಃ ಮತ್ತಾರೂ ನೆನಪು ಮಾಡಿಕೊಳ್ಳುವವರು ಇಲ್ಲ ಮತ್ತು ತಂದೆಗೂ ಸಹ ಮಕ್ಕಳ ವಿನಃ ಮತ್ತಾರೂ ಇಲ್ಲ. ಸದಾ ಇದೇ ಸ್ಮೃತಿಯಲ್ಲಿರುತ್ತೀರಿ- ನಾನು ತಂದೆಯವನು ಮತ್ತು ತಂದಯು ನನ್ನವರು- ಈ ಸ್ಮೃತಿಯು ಸಹಜವೂ ಆಗಿದೆ ಮತ್ತು ಸಮರ್ಥರನ್ನಾಗಿ ಮಾಡುವಂತಹದ್ದಾಗಿದೆ. ಇಂತಹ ಸ್ಮೃತಿಸ್ವರೂಪ ಸ್ನೇಹಿ ಮಕ್ಕಳು ಸಾಕಾರದಲ್ಲಷ್ಟೇ ಅಲ್ಲ. ಸ್ವಪ್ನದಲ್ಲಿಯೂ ಸಹ ಎಂದೂ ಅಸಮರ್ಥರಾಗಲು ಸಾಧ್ಯವಿಲ್ಲ. ಅಸಮರ್ಥರಾಗುವುದು ಎಂದರೆ 'ನನ್ನಬಾಬಾ'ನ ಬದಲು ಅನ್ಯ 'ನನ್ನತನ'ವು ಬಂದುಬಿಡುತ್ತದೆ. ಒಬ್ಬ ನನ್ನಬಾಬಾ- ಇದು ಮಿಲನ ಮಾಡುವುದಾಗಿದೆ. ಒಂದುವೇಳೆ ಒಂದರ ಬದಲು ನನ್ನದು ಎಂಬುದು ಎರಡು ಆಯಿತೆಂದರೆ ಏನಾಗಿಬಿಡುತ್ತದೆ? ಅದು ಮಿಲನವೋ ಅಥವಾ ಗೊಂದಲವೋ?

ತಂದೆಯಂತೂ ನನ್ನವರಾಗಿದ್ದಾರೆ ಆದರೂ ಇನ್ನೂ ಒಬ್ಬಿಬ್ಬರನ್ನು ನನ್ನವರನ್ನಾಗಿ ಮಾಡಿಕೊಳ್ಳಲೇ ಬೇಕಾಗುತ್ತದೆ ಎಂದು ಕೆಲವು ಮಕ್ಕಳು ಭಾವಿಸುತ್ತಾರೆ. ಮತ್ತಾರೂ ಇಲ್ಲ ಕೇವಲ ಒಂದು ಆಧಾರ ಬೇಕು ಎಂದು ಹೇಳುತ್ತಾರೆ. ಆದರೆ ಪ್ರತಿಜ್ಞೆಯೇನಾಗಿದೆ? ಒಬ್ಬ ತಂದೆಯ ವಿನಃ ಮತ್ತಾರೂ ಇಲ್ಲ. ಇದಾಗಿದೆಯೋ ಅಥವಾ ಒಬ್ಬ ತಂದೆ ಮತ್ತು ಇನ್ನೊಬ್ಬರು ಇದಾಗಿದೆಯೋ? ಮುಗ್ಧರಾಗಿಬಿಡುತ್ತೀರಿ. ಆ ಒಂದರಲ್ಲಿ ಅನೇಕರು ಸಮಾವೇಶವಾಗಿರುತ್ತಾರೆ ಆದ್ದರಿಂದ ಅಲ್ಲಿ ಗೊಂದಲವಾಗಿಬಿಡುತ್ತದೆ. ಹಳೆಯ ಪ್ರಪಂಚದಲ್ಲಿಯೂ ಇಂತಹ ಆಟದ ಗೊಂಬೆಗಳು ಸಿಗುತ್ತವೆ. ಅದು ಹೊರಗಿನಿಂದ ಒಂದೇ ಕಾಣಿಸುತ್ತದೆ ಆದರೆ ಒಂದರಲ್ಲಿ ಇನ್ನೊಂದು ಇರುತ್ತದೆ. ಒಂದನ್ನು ತೆರೆಯುತ್ತಾ ಹೋದರೆ ಅದರಲ್ಲಿ ಇನ್ನೊಂದು, ಮತ್ತೊಂದು ಹೀಗೆ ಬರುತ್ತಾ ಇರುತ್ತದೆ. ಇದೂ ಸಹ ಹಾಗೆಯೇ ಆಟದ ಸಾಮಗ್ರಿಯಾಗಿದೆ. ನೋಡಲು ಒಂದು ಆಧಾರವು ಮಾತ್ರ ಕಾಣಿಸುತ್ತದೆ ಆದರೆ ಅದರಲ್ಲಿ ಅನೇಕ ಆಧಾರಗಳು ಸಮಾವೇಶವಾಗಿರುತ್ತವೆ ಮತ್ತು ಯಾವಾಗ ಗೊಂದಲದಲ್ಲಿ ಹೊರಟುಹೋಗುವಿರೋ ಆಗ ಮಿಲನವನ್ನಾಚರಿಸಲು ಹೇಗೆ ಸಾಧ್ಯ! ಗೊಂದಲದಲ್ಲಿಯೇ ತೊಡಗಿರುತ್ತೀರೋ ಅಥವಾ ಮಿಲನ ಮಾಡುತ್ತೀರೋ ? ಕೇವಲ ತಂದೆಯ ಜೊತೆಗೆ ಇನ್ನೊಂದು ಆಧಾರ ಬೇಕು ಎಂದು ಯೋಚಿಸಬೇಡಿ. ಒಬ್ಬ ತಂದೆಯ ವಿನಃ ಒಂದುವೇಳೆ ಸಂಕಲ್ಪದಲ್ಲಿಯೂ ಮತ್ತಾವುದೇ ಆತ್ಮನನ್ನಾಗಲಿ ಅಥವಾ ಪ್ರಕೃತಿಯ ಸಾಧನವನ್ನಾಗಲಿ ನಿಮ್ಮ ಆಶ್ರಯವೆಂದು ಸ್ವೀಕಾರ ಮಾಡಿದರೆ ಈ ಆಟೋಮೆಟಿಕ್ ಈಶ್ವರೀಯ ಮೆಷಿನರಿಯು ಬಹಳ ತೀವ್ರಗತಿಯಿಂದ ಕಾರ್ಯ ಮಾಡುತ್ತದೆ. ಯಾವ ಸೆಕೆಂಡಿನಲ್ಲಿ ಅನ್ಯರನ್ನು ಆಶ್ರಯವನ್ನಾಗಿ ಮಾಡಿಕೊಂಡಿದ್ದೀರೋ ಅದೇ ಸೆಕೆಂಡಿನಲ್ಲಿ ಮನಸ್ಸು-ಬುದ್ಧಿಯು ತಂದೆಯಿಂದ ದೂರವಾಗಿಬಿಡುತ್ತದೆ. ಸತ್ಯತಂದೆಯಿಂದ ದೂರವಾಗುವ ಕಾರಣ ಬುದ್ಧಿಯು ಅಸತ್ಯವನ್ನು ಸತ್ಯವೆಂತಲೂ, ತಪ್ಪನ್ನು ಸರಿಯೆಂತಲೂ ಒಪ್ಪಿಕೊಳ್ಳಲು ಆರಂಭಿಸುತ್ತದೆ. ಉಲ್ಟಾ ನಿರ್ಣಯವನ್ನು ಕೊಡತೊಡಗುತ್ತದೆ. ಇದು ಸರಿಯಲ್ಲವೆಂದು ಯಾರೆಷ್ಟೇ ತಿಳಿಸಿದರೂ ಸಹ ಅವರು ಯಥಾರ್ಥವನ್ನು ಸತ್ಯವನ್ನೂ ಸಹ ಅಸತ್ಯದ ಶಕ್ತಿಯಿಂದ ತಿದ್ದಲು ಹೋಗುವವರನ್ನೂ ತಪ್ಪೆಂದು ಸಿದ್ಧ ಮಾಡುವರು. ಸದಾ ಇದನ್ನು ನೆನಪಿಟ್ಟುಕೊಳ್ಳಿರಿ- ಈಗಿನ ಪ್ರಪಂಚವು ಡ್ರಾಮಾನುಸಾರ ಅಸತ್ಯದ ರಾಜ್ಯವಾಗಿದೆ ಮತ್ತು ಅಸತ್ಯರಾಜ್ಯದ ಅಧಿಕಾರಿ ರಾಷ್ಟ್ರಪತಿ ರಾವಣನಾಗಿದ್ದಾನೆ. ರಾವಣನಿಗೆ ಎಷ್ಟೊಂದು ತಲೆಗಳಿವೆ ಅರ್ಥಾತ್ ಅಸತ್ಯದ ಶಕ್ತಿಯು ಎಷ್ಟು ಮಹಾನ್ ಆಗಿದೆ!! ರಾವಣನ ಮಂತ್ರಿ, ಮಹಾಮಂತ್ರಿಗಳೂ ಸಹ

ಬಹಳ ಮಹಾನ್ ಆಗಿದ್ದಾರೆ. ಅವರ ನ್ಯಾಯಾಧೀಶರು ಮತ್ತು ವಕೀಲರೂ ಸಹ ಬಹಳ ಬುದ್ಧಿವಂತರಾಗಿದ್ದಾರೆ ಆದ್ದರಿಂದ ಉಲ್ಟಾನಿರ್ಣಯದ ಮಾತುಗಳನ್ನು ಬಹಳ ವಿಭಿನ್ನ ಮತ್ತು ಹೊರಗಿನಿಂದ ಮಧುರರೂಪದಲ್ಲಿ ಸಿದ್ಧಮಾಡತೊಡಗುತ್ತಾರೆ. ಆದ್ದರಿಂದ ಸತ್ಯವನ್ನು ಅಸತ್ಯವೆಂದು ಸಿದ್ಧ ಮಾಡುವುದರಲ್ಲಿ ಬಹಳ ಬುದ್ಧಿವಂತರಾಗಿರುತ್ತಾರೆ.

ಆದರೆ ಅಸತ್ಯ ಮತ್ತು ಸತ್ಯದಿಲ್ಲಿ ವಿಶೇಷ ಅಂತರವೇನಾಗಿದೆ? ಅಸತ್ಯದ ವಿಜಯವು ಅಲ್ಪಕಾಲದ್ದಾಗಿರುತ್ತದೆ. ಏಕೆಂದರೆ ಅಸತ್ಯರಾಜ್ಯವೇ ಅಲ್ಪಕಾಲದ್ದಾಗಿದೆ. ಸತ್ಯತೆಯ ಸೋಲು ಅಲ್ಪಕಾಲದ್ದು ಮತ್ತು ಜಯವು ಸದಾಕಾಲದ್ದಾಗಿದೆ. ಅಸತ್ಯದ ಅಲ್ಪಕಾಲದ ವಿಜಯಿಗಳು ಆ ಸಮಯದಲ್ಲಿ ಖುಷಿಯಾಗುತ್ತಾರೆ. ಎಷ್ಟು ಸ್ವಲ್ಪಸಮಯ ಖುಷಿಯನ್ನಾಚರಿಸುತ್ತಾರೆ ಮತ್ತು ತನ್ನನ್ನು ಸರಿಯೆಂದು ಸಿದ್ಧ ಮಾಡಿಕೊಳ್ಳುವರೋ ಅಷ್ಟೇ ಸಮಯಬಂದಾಗ ಅಸತ್ಯದ ಅ ಕಾಲದ ಸಮಯವು ಸಮಾಪ್ತಿಯಾದಾಗ ಎಷ್ಟು ಅಸತ್ಯತೆಗೆ ವಶವಾಗಿ ಮೋಜನ್ನಾಚರಿಸಿದರೋ ಅಷ್ಟೇ ನೂರುಪಟ್ಟು ಸತ್ಯತೆಯ ವಿಜಯವು ಪ್ರತ್ಯಕ್ಷವಾದಾಗ ಪಶ್ಚಾತ್ತಾಪ ಪಡಲೇಬೇಕಾಗುತ್ತದೆ. ಏಕೆಂದರೆ ತಂದೆಯಿಂದ ದೂರವಾದವರೂ ಭಲೆ ಸ್ಥೂಲದಲ್ಲಿ ದೂರವಾಗುವುದಿಲ್ಲ. ಸ್ಥೂಲದಲ್ಲಿ ಸ್ವಯಂನ್ನು ಜ್ಞಾನಿಯೆಂದು ತಿಳಿದುಕೊಳ್ಳುತ್ತಾರೆ ಆದರೆ ಮನಸ್ಸು-ಬುದ್ಧಿಯಿಂದ ದೂರವಾಗುತ್ತದೆ ಮತ್ತು ತಂದೆಯಿಂದ ದೂರವಾಗುವುದು ಎಂದರೆ ಸದಾಕಾಲದ ಸರ್ವಪ್ರಾಪ್ತಿಗಳ ಅಧಿಕಾರದಿಂದ ಸಂಪನ್ನರಾಗುವ ಬದಲು ಅರ್ಧಂಬರ್ಧ ಅಧಿಕಾರವನ್ನು ಪ್ರಾಪ್ತಿ ಮಾಡಿಕೊಳ್ಳುವುದು. ಕೆಲವು ಮಕ್ಕಳು ತಿಳಿದುಕೊಳ್ಳುತ್ತಾರೆ. “ಅಸತ್ಯತೆಯ ಬಲದಿಂದ ಅಸತ್ಯದ ರಾಜ್ಯದಲ್ಲಿ ವಿಜಯದ ಖುಷಿ ಹಾಗೂ ಮೋಜನ್ನು ಈ ಸಮಯದಲ್ಲಿ ಆಚರಿಸೋಣ". ಭವಿಷ್ಯವನ್ನು ಯಾರು ನೋಡಿದ್ದಾರೆ! ಯಾರು ನೋಡುತ್ತಾರೆ ನಾವು ಮರೆತುಹೋಗುತ್ತೇವೆ. ಎಲ್ಲರೂ ಮರೆತುಹೋಗುತ್ತಾರೆ" ಆದರೆ ಇದು ಅಸತ್ಯದ ನಿರ್ಣಯವಾಗಿದೆ. ಭವಿಷ್ಯವು ವರ್ತಮಾನದ ನೆರಳಾಗಿದೆ. ವರ್ತಮಾನವಿಲ್ಲದೆ ಭವಿಷ್ಯವು ರೂಪುಗೊಳ್ಳುವುದಿಲ್ಲ. ಅಸತ್ಯಕ್ಕೆ ವಶೀಭೂತ ಅತ್ಮರು ವರ್ತಮಾನ ಸಮಯದಲ್ಲಿಯೂ ಅಲ್ಪಕಾಲದ ಸುಖದ ಹೆಸರು, ಸ್ಥಾನಮಾನ, ಗೌರವದ ಸುಖದ ಉಯ್ಯಾಲೆಯಲ್ಲಿ ಭಲೆ ತೂಗಬಹುದು ಮತ್ತು ಅವಶ್ಯವಾಗಿ ತೂಗುತ್ತಾರೆ. ಆದರೆ ಅತೀಂದ್ರಿಯ ಸುಖದ ಉಯ್ಯಾಲೆಯಲ್ಲಿ ತೂಗಲು ಸಾಧ್ಯವಿಲ್ಲ. ಅಲ್ಪಕಾಲದ ಸ್ಥಾನಮಾನ, ಗೌರವದ ಮೋಜನ್ನಾಚರಿಸಬಹುದು ಆದರೆ ಸರ್ವಆತ್ಮರ ಹೃದಯದ ಸ್ನೇಹದ, ಹೃದಯದ ಆಶೀರ್ವಾದಗಳ ಮಾನ್ಯತೆಯನ್ನು ಪ್ರಾಪ್ತಿ ಮಾಡಿಕೊಳ್ಳಲು ಸಾಧ್ಯವಿಲ್ಲ, ತೋರ್ಪಡಿಕೆಯ ಮಾನ್ಯತೆಯನ್ನು ಪಡೆಯಬಹುದು ಆದರೆ ಹೃದಯದಿಂದ ಮಾನ್ಯತೆಯನ್ನು ಪಡೆಯಲಾರರು. ಅಲ್ಪಕಾಲದ ಕೀರ್ತಿ ಸಿಗುತ್ತದೆ ಆದರೆ ತಂದೆಯೊಂದಿಗೆ ಸದಾ ಹೃದಯ ಸಿಂಹಾಸನಾಧಿಕಾರದ ಕೀರ್ತಿಯನ್ನು ಅನುಭವ ಮಾಡಲು ಸಾಧ್ಯವಿಲ್ಲ. ಅಸತ್ಯತೆಯ ಜೊತೆಗಾರರ ಮೂಲಕ ಹೆಸರನ್ನೂ ಪ್ರಾಪ್ತಿ ಮಾಡಿಕೊಳ್ಳಬಹುದು ಆದರೆ ಬಾಪ್ ದಾದಾರವರ ಹೃದಯದಲ್ಲಿ ಹೆಸರನ್ನು ಪ್ರಾಪ್ತಿ ಮಾಡಿಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ಬಾಪ್‌ದಾದಾರವರೊಂದಿಗೆ ದೂರವಿದ್ದಾರೆ. ಭವಿಷ್ಯದ ಮಾತನ್ನಂತೂ ಬಿಟ್ಟುಬಿಡಿ ಆದರೆ ವರ್ತಮಾನದಲ್ಲಿ ಸತ್ಯತೆ ಮತ್ತು ಅಸತ್ಯತೆಯ ಮಾರ್ಗದಲ್ಲಿ ಎಷ್ಟೊಂದು ಅಂತರವಿದೆ! ತಂದೆಯ ಜೊತೆಗೆ ಮತ್ತೊಬ್ಬರನ್ನು ತನ್ನವರನ್ನಾಗಿ ಮಾಡಿಕೊಳ್ಳುವುದು ಎಂದರೆ ಅಸತ್ಯತೆಯ ಆಶ್ರಯ ತೆಗೆದುಕೊಳ್ಳುವುದು. ಅಲ್ಲಿ ಎಷ್ಟು ಗೊಂದಲವಾಯಿತು. ಹೇಳಿಕೆಗೆ ಮಾತ್ರ ಹೇಳುತ್ತಾರೆ- ಮತ್ತೇನೂ ಇಲ್ಲ ಕೇವಲ ಕೆಲಕೆಲವೊಮ್ಮೆ ಮಾತ್ರ ಸ್ವಲ್ಪ ಆಶ್ರಯ ಬೇಕಾಗುತ್ತದೆ ಎಂದು. ಆದರೆ

ಪ್ರತಿಜ್ಞೆಯನ್ನು ಮುರಿಯುವುದು ಎಂದರೆ ಗೊಂದಲದಲ್ಲಿ ಸಿಲುಕುವುದು. ಅಂದಮೇಲೆ ಒಬ್ಬ ನನ್ನಬಾಬಾ ಹಾಗೂ ಕೆಲಕೆಲವೊಮ್ಮೆ ಇನ್ನೊಬ್ಬರು. ಈ ರೀತಿ ಪ್ರತಿಜ್ಞೆ ಮಾಡಿದ್ದೀರಾ!? ಇದನ್ನೇ ಬರೆದಿದ್ದೀರಾ? ಭಲೆ ಅಲ್ಪ ಕಾಲದ ಸ್ಥಾನ-ಮಾನ, ಹೆಸರಿನ ಆಶ್ರಯ ತೆಗೆದುಕೊಳ್ಳಿ. ವ್ಯಕ್ತಿಗಳ ಆಶ್ರಯ ತೆಗೆದುಕೊಳ್ಳಿ. ವೈಭವದ ಆಶ್ರಯ ತೆಗೆದುಕೊಳ್ಳಿ. ಯಾವಾಗ ಮತ್ತಾರೂ ಇಲ್ಲವೆಂದಾಗ ಮತ್ತೊಬ್ಬರು ಎಲ್ಲಿಂದ ಬಂದರು! ಇವು ಅಸತ್ಯದ ರಾಜ್ಯದ ಜನಜಂಗುಳಿಯಲ್ಲಿ ಸಿಲುಕಿಸುವ ಚಾತುರ್ಯತೆಗಳಾಗಿವೆ. ಹೇಗೆ ತಂದೆಯು ಹೇಳುತ್ತಾರಲ್ಲವೆ- ನಾನು ಯಾರಾಗಿದ್ದೇನೆ. ಹೇಗಿದ್ದೇನೆಯೋ ಹಾಗೆಯೇ ನನ್ನನ್ನು ಅರಿತುಕೊಳ್ಳುವವರು ನಂಬರ್‌ವಾರ್ ಇದ್ದಾರೆ ಹಾಗೆಯೇ ಅಸತ್ಯದ ರಾಜ್ಯಾಧಿಕಾರಿ ರಾವಣನನು ಯಾರಾಗಿದ್ದಾನೆ. ಹೇಗಿದ್ದಾನೆಯೋ ಅದೇ ರೂಪದಿಂದ ಸದಾ ನೀವು ಅರಿತುಕೊಳ್ಳುವುದಿಲ್ಲ. ಕೆಲವೊಮ್ಮೆ ಗುರುತಿಸುತ್ತೀರಿ. ಕೆಲವೊಮ್ಮೆ ಮರೆತುಹೋಗುತ್ತೀರಿ. ರಾಜ್ಯಾಧಿಕಾರಿ ಆಗಿರುವುದರಿಂದ ಕಡಿಮೆ ಶಕ್ತಿಯಿರುತ್ತದೆಯೇ! ಭಲೆ ಅಸತ್ಯವಂತನಾಗಿರಲಿ, ಸತ್ಯವಂತನಾಗಿರಲಿ ಆದರೆ ಅವನ ರಾಜ್ಯವಂತೂ ಇದೆಯಲ್ಲವೇ! ಆದ್ದರಿಂದ ತನ್ನನ್ನು ಪರಿಶೀಲನೆ ಮಾಡಿಕೊಳ್ಳಿರಿ ಅನ್ಯರನ್ನಲ್ಲ.

ಇತ್ತೀಚೆಗೆ ಅನ್ಯರನ್ನು ಪರಿಶೀಲನೆ ಮಾಡುವುದರಲ್ಲಿ ಎಲ್ಲರೂ ಬುದ್ಧಿವಂತರಾಗಿಬಿಟ್ಟಿದ್ದಾರೆ ಅದ್ದರಿಂದ ಬಾಪ್‌ದಾದಾ ಹೇಳುತ್ತಾರೆ- ತಮಗೆ ತಾವೇ ಟೆಸ್ಟರ್ ಆಗಿರಿ ಮತ್ತು ಅನ್ಯರಿಗೆ ಮೇಕರ್ ಆಗಿರಿ. ಆದರೆ ಮಾಡುವುದೇನು? ಅನ್ಯರಿಗೆ ಚೆಕ್ಕರ್ ಆಗಿಬಿಡುತ್ತೀರಿ ಮತ್ತು ಮಾತುಗಳನ್ನು ಕಟ್ಟುವುದರಲ್ಲಿ ಮೇಕರ್ ಆಗಿಬಿಡುತ್ತೀರಿ, ಬಾಪ್ ದಾದಾ ಪ್ರತಿನಿತ್ಯದ ಪ್ರತಿಯೊಬ್ಬ ಮಗುವಿನ ಯಾವ ಕಥೆಗಳನ್ನು ಕೇಳಿಸಿಕೊಳ್ಳುತ್ತಾರೆ ಗೊತ್ತಿದೆಯೇ? ಕಥೆಗಳ ಪುಸ್ತಕಗಳು ಬಹಳ ದೊಡ್ಡದಾಗಿದೆ ಆದ್ದರಿಂದ ಈಗ ತಮ್ಮನ್ನು ಪರಿಶೀಲನೆ ಮಾಡಿಕೊಳ್ಳಿ, ಅನ್ಯರನ್ನು ಪರಿಶೀಲನೆ ಮಾಡಿದಾಗ ಬಹಳ ಉದ್ದಗಲವಾದ ಕಥೆಗಳಾಗುತ್ತವೆ ಮತ್ತು ತನ್ನನ್ನು ಪರಿಶೀಲಿಸಿಕೊಂಡಾಗ ಎಲ್ಲಾ ಕಥೆಗಳು ಸಮಾಪ್ತಿಯಾಗಿ ಒಂದು ಸತ್ಯಜೀವನದ ಕಥೆಯು ಪ್ರತ್ಯಕ್ಷದಲ್ಲಿ ನಡೆಯುತ್ತದೆ. ಬಾಬಾ, ತಮ್ಮೊಂದಿಗೆ ಬಹಳ ಪ್ರೀತಿಯೆಂದು ಎಲ್ಲರೂ ಹೇಳುತ್ತಾರೆ. ಕೇವಲ ಹೇಳುತ್ತೀರೋ ಅಥವಾ ಮಾಡುತ್ತೀರೋ? ಏನು ಹೇಳುವಿರಿ? ಕೆಲವೊಮ್ಮೆ ಹೇಳುತ್ತೀರಿ. ಕೆಲವೊಮ್ಮೆ ಮಾಡುತ್ತೀರಿ. ತಂದೆಯ ಪ್ರೀತಿಯ ಪ್ರತ್ಯಕ್ಷ ಪ್ರಮಾಣವನ್ನಂತೂ ತಂದೆಯು ಕೊಟ್ಟುಬಿಟ್ಟರು. ಹೇಗಿದ್ದೀರೋ, ಯಾರಾಗಿದ್ದೀರೋ ನನ್ನವರಾಗಿದ್ದೀರಿ ಎಂದು ಸ್ವೀಕಾರ ಮಾಡಿದರು ಆದರೆ ಈಗ ನೀವು ಮಕ್ಕಳು ಪ್ರತ್ಯಕ್ಷ ಪ್ರಮಾಣವನ್ನು ತೋರಿಸಬೇಕಾಗಿದೆ ಯಾವ ಪ್ರಮಾಣವನ್ನು ತೋರಿಸುತ್ತೀರಿ? ಹೇಗಿದ್ದೀರೋ ಯಾರಾಗಿದ್ದೀರೋ ನನ್ನವರಾಗಿದ್ದೀರಿ ಎಂದು ತಂದೆಯು ಹೇಳುತ್ತಾರೆ ಮತ್ತು ತಾವು ಏನು ಹೇಳುತ್ತೀರಿ? ಎಲ್ಲವೂ ತಾವೊಬ್ಬರೇ ಆಗಿದ್ದೀರಿ ಎಂದು ಹೇಳುವಿರಾ? ತಂದೆಯ ಜೊತೆಗೆ ಸ್ವಲ್ಪ-ಸ್ವಲ್ಪ ಅನ್ಯರೂ ಇದ್ದಾರೆ ಎಂದು ಹೇಳುವಂತಿಲ್ಲ. ತಂದೆಯೊಂದಿಗೆ ಪ್ರೀತಿಯಿದೆ ಆದರೆ ಕೆಲಕೆಲವೊಮ್ಮೆ ಅಸತ್ಯದ ರಾಜ್ಯದ ಪ್ರಭಾವದಲ್ಲಿ ಬಂದುಬಿಡುತ್ತೀರಿ. ಒಳ್ಳೆಯದು-

**ನಾಲ್ಕಾರು ಕಡೆಯ ಯಥಾರ್ಥ ಸತ್ಯವನ್ನು ಗುರುತಿಸುವಂತಹ ಸತ್ಯತಂದೆಯ ಸತ್ಯಮಕ್ಕಳಿಗೆ, ಸರ್ವಸ್ನೇಹದಲ್ಲಿ ಸಮಾವೇಶವಾಗಿರುವ ಶ್ರೇಷ್ಠ ಆತ್ಮರಿಗೆ, ಸದಾ ಪ್ರತಿಜ್ಞೆಯನ್ನು ನಿಭಾಯಿಸುವಂತಹ ಸರ್ವಸಮರ್ಥ ಆತ್ಮರಿಗೆ,**

**ಯಥಾರ್ಥವನ್ನು ಗುರುತಿಸುವಂತಹ ಸರ್ವಶಕ್ತಿಶಾಲಿ ಆತ್ಮರಿಗೆ ನೆನಪು ಮತ್ತು ಸೇವೆಯಲ್ಲಿ ನಿರ್ವಿಘ್ನರಾಗಿರುವವರಿಗೆ, ಸದಾ ಜೊತೆ ಮತ್ತು ಸಮೀಪ ಇರುವಂತಹ ಮಕ್ಕಳಿಗೆ ಪ್ರೀತಿಯಸ್ಮೃತಿ ಹಾಗೂ ನಮಸ್ತೆ.**

**ಮಧುಬನ ನಿವಾಸಿಗಳ ಪ್ರತಿ ಅವ್ಯಕ್ತ ಬಾಪ್ ದಾದಾರವರ ಮಧುರ ಮಹಾವಾಕ್ಯಗಳು;-**

ಮಧುಬನ ನಿವಾಸಿಗಳಿಗೆ ಮತ್ತೆಲ್ಲಿಯೂ ಸಿಗುವುದಿರುವ ಪ್ರತ್ಯಕ್ಷಫಲ ಸಿಗುತ್ತದೆಯಲ್ಲವೇ! ಮಧುಬನದ ವಿಶೇಷತೆ ಏನಾಗಿದೆ ಶ್ರೇಷ್ಠ ಕರ್ಮ ಭೂಮಿಯಲ್ಲಿರುವಂತಹವರು ಸದಾ ಫಾಲೋ ಫಾದರ್ ಮಾಡುತ್ತಾರೆ. ಮಧುಬನದ ಶ್ರೇಷ್ಠತೆಯಂತೂ ಇದೇ ಆಗಿದೆ. ಇದು ಬ್ರಹ್ಮಾ ತಂದೆಯ ವಿಶೇಷ ಕರ್ಮ ಭೂಮಿ ಆಗಿದೆ ಹಾಗಾದರೆ ಮಧುಬನ ನಿವಾಸಿ ಯಾವುದೇ ಕರ್ಮ ಮಾಡುತ್ತಾರೆ ಎಂದರೆ ಅದು ಫಾಲೋ ಫಾದರ್ ಮಾಡುತ್ತಾರೆ. ಕರ್ಮ ಭೂಮಿಯಲ್ಲಿ ವಿಶೇಷತೆ ಕರ್ಮದ್ದಾಗಿರುತ್ತದೆ ಹಾಗಾದರೆ ಕರ್ಮದಲ್ಲಿ ಫಾಲೋ ಮಾಡುತ್ತೀರಾ? ಯಾರೇ ಅಮೃತವೇಳೆಯಿಂದ ಹಿಡಿದು ರಾತ್ರಿಯವರೆಗೂ ಕರ್ಮ ಮಾಡುತ್ತೀರಿ ಅದರಲ್ಲಿ ಫಾಲೋ ಫಾದರ್ ಇದೆಯೇ ಮಧುಬನ ನಿವಾಸಿಗಳಿಗೆ ಮತ್ತಷ್ಟು ಅಧಿಕ ಕರ್ಮಭೂಮಿಯ ಬಲ ಸಿಗುತ್ತದೆ. ಇದು ಕರ್ಮದಲ್ಲಿ ಕಾಣಿಸಿಕೊಳ್ಳುತ್ತದೆ ಅಥವಾ ಕಾಣಿಸಿಕೊಳ್ಳಬೇಕು. ಏನು ಹೇಳುತ್ತೀರಿ ನೀವು ನಿಮ್ಮಲ್ಲಿ ನೋಡಿಕೊಳ್ಳುತ್ತೀರಾ ಒಂದೋದು ಹೆಜ್ಜೆ ಮುಂದೆ ಇಡಿ - ಏಳುವುದು, ಕೂರುವುದು, ನಡೆದಾಡುವುದು. ಮಾತನಾಡುವುದು, ಸಂಬಂಧ, ಸಂಪರ್ಕದಲ್ಲಿ ಬರುವುದು ಎಲ್ಲದರಲ್ಲೂ ಬ್ರಹ್ಮಾ ತಂದೆಯ ಕರ್ಮವನ್ನು ಫಾಲೋ ಮಾಡುತ್ತೀರಾ. ಕರ್ಮ ಭೂಮಿಯ ಲಾಭವಂತೂ ಇದೇ ಆಗಿದೆಯಲ್ಲವೇ ಹಾಗಾದರೆ ಇಷ್ಟು ಲಾಭವನ್ನು ಪಡೆದುಕೊಳ್ಳುತ್ತೀದ್ದೀರಾ? ಶಕ್ತಿಯರು ಏನು ತಿಳಿಯುತ್ತೀರಿ? ಕರ್ಮ ಭೂಮಿಯ ಲಾಭ ಎಷ್ಟು ಮಧುಬನ ತೆಗೆದುಕೊಳ್ಳುತ್ತದೆ ಎಷ್ಟು ಅದನ್ನು ಬೇರೆಯವರು ತೆಗೆದುಕೊಳ್ಳಲು ಇಲ್ಲಿಗೆ ಬರಬೇಕಾಗುತ್ತದೆ ಆದರೆ ನಿಮಗೆ ಸಿಕ್ಕಿದ್ದೇ ವರದಾನಿ & ಕರ್ಮ ಭೂಮಿಯಾಗಿದೆ. ಹಾಗಾದರೆ ಪ್ರತಿ ಕರ್ಮ ವರದಾನದ ಯೋಗ್ಯವಾಗಿದೆಯೇ ಯಾರೇ ನೋಡಿದರೂ ಮುಖದಿಂದ ವರದಾನ ಬರುತ್ತದೆಯೇ? ಇದನ್ನೇ ವರದಾಗಿ ಭೂಮಿಯ ವರದಾನವನ್ನು ತೆಗೆದುಕೊಳ್ಳುವುದು ಎಂದು ಹೇಳಲಾಗುತ್ತದೆ. ಬೇಕಾದರೆ ಸಾಧಾರಣ ಕರ್ಮ ಮಾಡುತ್ತೀರಿ ಆದರೆ ಸಾಧಾರಣ ಕರ್ಮದಲ್ಲಿ ವಿಶೇಷತೆ ಕಾಣಿಸಿಕೊಳ್ಳಲಿ ಇದೇ ಮಧುಬನದ ವಿಶೇಷತೆ ಆಗಿದೆಯಲ್ಲವೇ.

ವಿಶೇಷ ಬ್ರಹ್ಮಾಬಾಬಾರವರು ತಮ್ಮ ಕರ್ಮ ಭೂಮಿಯಲ್ಲಿ ಇರುವಂತಹವರ ಪ್ರತಿ ವಿಶೇಷವಾಗಿ ಶ್ರೇಷ್ಠ ಆಸೆ ಇದೆ ಆಗಿದೆ - ಮಧುಬನದ ಒಬ್ಬೊಬ್ಬ ಬ್ರಾಹ್ಮಣ ಆತ್ಮ. ಶ್ರೇಷ್ಠ ಆತ್ಮ ಪ್ರತೀ ಕರ್ಮದಲ್ಲಿ ಬ್ರಹ್ಮಾ ತಂದೆಯ ಕರ್ಮದ ದರ್ಪಣವಾಗಿರಲಿ, ಹಾಗಾದರೆ ದರ್ಪಣದಲ್ಲಿ ಏನು ಕಾಣಿಸುತ್ತದೆ? ಇದೇ ಕಾಣಿಸುತ್ತದೆಯಲ್ಲವೇ ಒಂದು ವೇಳೆ ನೀವು ದರ್ಪಣದ ಮುಂದೆ ನಿಂತುಕೊಂಡರೆ ಹೇಗಿದ್ದೀರೋ ಹಾಗೆ ನೀವೆ ಕಾಣಿಸುತ್ತೀರಲ್ಲವೇ ಅಥವಾ ಬೇರೆಯವರು ಕಾಣಿಸುತ್ತಾರೆಯೊ? ಹಾಗಾದರೆ ಬ್ರಹ್ಮಾತಂದೆಯ ಕರ್ಮ ನಿಮ್ಮ ಕರ್ಮದ ದರ್ಪಣದಲ್ಲಿ ಕಾಣಿಸಲಿ. ಭಾಗ್ಯವಂತರಾಗಿದ್ದೀರಿ ಇದನ್ನಂತು ಎಲ್ಲರೂ ಹೇಳುತ್ತೀರಿ ಹಾಗು ಆಗಿದ್ದೀರಿ ಆದರೆ ಪ್ರತಿ ಕರ್ಮದಲ್ಲಿ ಬ್ರಹ್ಮಾತಂದೆಯ ಕರ್ಮ ಕಾಣಿಸಲಿ ಈ ಸರ್ಟಿಫಿಕೇಟ್ ಯಾರು ತೆಗೆದುಕೊಳ್ಳುತ್ತೀರಿ ಹಾಗು ಯಾವಾಗ ತೆಗೆದುಕೊಳ್ಳುತ್ತೀರಿ? ತೆಗೆದುಕೊಳ್ಳಬೇಕಲ್ಲವೇ ಅಥವಾ

ತೆಗೆದುಕೊಂಡು ಬಿಟ್ಟಿದ್ದೀರಾ? ಯಾರು ಈ ಸರ್ಟಿಫಿಕೇಟ್ ತೆಗೆದುಕೊಂಡು ಬಿಟ್ಟಿದ್ದೀರೋ ಅವರ ಪ್ರತಿ ಕರ್ಮದಲ್ಲಿ ಬ್ರಹ್ಮಾತಂದೆಯ ಕರ್ಮ ಕಾಣಿಸುತ್ತಿದೆ. ಅವರ ಮಾತು ಬ್ರಹ್ಮನ ಮಾತಿನ ಸಮಾನವಿದೆ, ಏಳುವುದು. ಕೂರುವುದು, ನೋಡುವುದು, ನಡೆಯುವುದು - ಎಲ್ಲವೂ ಸಮಾನ ಈ ರೀತಿ ಸರ್ಟಿಫಿಕೇಟ್ ತೆಗೆದುಕೊಂಡಿದ್ದೀರಾ ಯಾರು ತೆಗೆದುಕೊಳ್ಳಬೇಕೋ ಅವರು ಕೈ ಎತ್ತಿ. ಇದೂ ಕೂಡ ಒಳ್ಳೆಯದಾಗಿದೆ. ಹೇಳುವ ಮೊದಲು ಮಾಡಿ ತೋರಿಸುತ್ತೇವೆ. ಆದರೆ ಈ ಲಕ್ಷ್ಯವನ್ನು ಇಟ್ಟುಕೊಳ್ಳಿ. ಪ್ರತಿ ಕರ್ಮ ತಂದೇಯ ಸಮಾನವಿರಲಿ, ಬ್ರಹ್ಮಾತಂದೆಯನ್ನಂತು ಫಾಲೋ ಮಾಡುವುದು ಸಹಜವಾಗಿದೆಯಲ್ಲವೇ ನಿರಾಕಾರಿ ಆಗುವುದು ಅರ್ಥಾತ್ ಸದಾ ನಿರಾಕಾರಿ ಸ್ಥಿತಿಯಲ್ಲಿ ಸ್ಥಿತರಾಗುವುದು. ಅದರ ಬದಲಾಗಿ ಕರ್ಮದಲ್ಲಿ ಫಾಲೋ ಮಾಡುವುದು ಅದಕ್ಕಿಂತ ಸಹಜವಾಗಿದೆ ಹಾಗಾದರೆ ಬ್ರಹ್ಮಾತಂದೆಯಂತೂ ಸಹಜ ಕಾರ್ಯವನ್ನು ಕೊಡುತ್ತಿದ್ದಾರೆ. ಕಷ್ಟವಲ್ಲ. ಹಾಗಾದರೆ ಲಕ್ಷ್ಯವಿಡಿ - ಮಧುಬನದಲ್ಲಿ ಯಾರನ್ನೇ ನೋಡಿದರೂ, ಎಲ್ಲೇ ನೋಡಿದರೂ ಬ್ರಹ್ಮಾತಂದೆಯ ಕರ್ಮ ಕಾಣಿಸಿಕೊಳ್ಳಲಿ. ಕರ್ಮದಲ್ಲಿ ಸರ್ವವ್ಯಾಪಿ ಬ್ರಹ್ಮ ಮಾಡಬಲ್ಲರಾ. ಎಲ್ಲಿ ನೋಡಿದರು ಬ್ರಹ್ಮನ ಸಮಾನ ಆಗುತ್ತದೆಯಲ್ಲವೇ.

ಮಧುಬನದ ಮಹಿಮೆ ಅರ್ಥಾತ್ ಮಧುಬನ ನಿವಾಸಿಯರ ಮಹಿಮೆ ಮಧುಬನದ ಗೋಡೆಗಳ ಮಹಿಮೆಯಲ್ಲ, ಮಧುಬನ ನಿವಾಸಿಯರ ಮಹಿಮೆಯಾಗಿದೆ. ಮಧುಬನದ ಮಹಿಮೆ ನಾಲ್ಕಾರು ಕಡೆಯಿಂದ ಪ್ರತಿ ದಿನ ಕೇಳುತ್ತೀರಲ್ಲವೇ. ಮಧುಬನ ನಿವಾಸಿಯರ ಮಹಿಮೆ ಏನಾಗುತ್ತದೆ ಅದು ಯಾರದ್ದಾಗಿದೆ? ನಿಮ್ಮೆಲ್ಲರದ್ದಾಗಿದೆಯಲ್ಲವೇ ನಶೆಯಂತೂ ಇರುತ್ತದೆ ನಾವು ಮಧುಬನ ನಿವಾಸಿಗಳಾಗಿದ್ದೇವೆ ಎಂದು. ಹೇಗೆ ಈ ನಶೆ ಇದೆಯೋ ಹಾಗೆಯೇ ಈ ನಶೆ ಖುಷಿಯು ಪ್ರತ್ಯಕ್ಷವಾಗಿ ಕಾಣಿಸಿಕೊಳ್ಳಲಿ - ಇವರು ಬ್ರಹ್ಮಾತಂದೆಯ ಸಮಾನ ಫಾಲೋ ಫಾದರ್ ಮಾಡುವವರಾಗಿದ್ದಾರೆ. ಒಳ್ಳೆಯದು ಎಲ್ಲರೂ ಸಂತುಷ್ಟರಾಗಿದ್ದೀರಾ? ಯಾವುದಾದರೂ ಪರಿಹಾರ ಬೇಕೆ? ಪರಿಹಾರದ ಭೂಮಿಯಲ್ಲಿ ಕುಳಿತಿದ್ದೀರಿ. ಎಷ್ಟು ನಿಶ್ಚಿಂತರಾಗಿ ಕುಳಿತಿದ್ದೀರಿ. ಶರೀರದ ಪರಿಶ್ರಮ ಪಡುತ್ತೀರಿ ಮತ್ತೆಲ್ಲವೂ ಮಾಡಿ ಮಾಡಿಸಿದ್ದು ಸಿಗುತ್ತದೆ ಯಾರು ಶರೀರದ ಪರಿಶ್ರಮ ಪಡುವುದಿಲ್ಲ ಅವರಿಗೆ ವ್ಯಾಯಾಮದ ಪರಿಶ್ರಮವನ್ನು ಮಾಡಿಸುತ್ತಾರೆ. ನೀವಂತು ಲಕ್ಕಿ ಆಗಿದ್ದೀರಿ ಅಲ್ಲವೇ. ಯಾವುದೇ ವ್ಯಾಯಾಮ ಮಾಡಬೇಕಾಗಿಲ್ಲ. ಕೈ ಕಾಲು ಆಡುತ್ತಾ ಇರುತ್ತವೆ. ಯಾರು ಎಷ್ಟು ಕಠಿಣ ಪರಿಶ್ರಮ ಮಾಡುತ್ತಾರೆ ಅಷ್ಟು ಶೇರ್ ಆಗಿದ್ದಾರೆ. ಮಾಯೆಯಿಂದಲೂ ಹಾಗು ಶರೀರದ ವ್ಯಾಧಿಯಿಂದಲೂ ಬುದ್ಧಿಯಂತೂ ಬಿಜಿಯಾಗಿರುತ್ತದೆಯಲ್ಲವೇ ಬೇರೇನು ವ್ಯರ್ಥ ನಡೆಯುವುದಿಲ್ಲ. ಹಾಗಾದರೆ ಸದಾ ಯಾರು ಬಿಜಿ ಆಗಿರುತ್ತಾರೆಯೊ ಅವರು ಬಹಳ ಲಕ್ಕಿಯಾಗಿದ್ದಾರೆ ಹಾಗಾಗಿ ತಮ್ಮನ್ನು ಫ್ರೀ ಆಗಿ ಇಟ್ಟುಕೊಳ್ಳಬೇಡಿ. ಬಹಳ ಸಮಯ ಪರಿಶ್ರಮ ಪಟ್ಟಿದ್ದೇನೆ, ಈಗ ಫ್ರೀ ಆಗುತ್ತೇನೆ ಎಂದಲ್ಲ, ಬಿಜಿಯಾಗಿರುವುದು ಖುಷಿಯ ಅದೃಷ್ಟದ ಚಿಹ್ನೆಯಾಗಿದೆ. ಖುಷಿಯ ಅದೃಷ್ಟವಂತರಾಗಿದ್ದೀರಲ್ಲವೇ ತಮ್ಮನ್ನು ತಾವು ಸದಾ ಬಿಜಿಯಾಗಿಟ್ಟುಕೊಳ್ಳಿ. ಒಳ್ಳೆಯದು ಈಗ ಬಾಪ್ ದಾದಾರವರಿಗೆ ಮಾಡಿ ತೋರಿಸಿ. ತಿಳಿಯಿತೇ.

ಬ್ರಹ್ಮಾಬಾಬಾರವರ ವಿಶೇಷತೆ ಚೆಹರೆಯಲ್ಲಿ ಏನು ಕಾಣಿಸಿತು ಗಂಭೀರತೆಯ ಚಿಹ್ನೆಯೂ ಇತ್ತು ಹಾಗೂ ಮುಗುಳ್ನಗೆಯೂ ಇತ್ತು. ಗಂಭೀರತೆ ಅರ್ಥಾತ್ ಅಂತರ್ಮುಖತೆ ಹಾಗು ಜೊತೆ ಜೊತೆ ರಮಣಿಕತೆ ಅಂತರ್ಮುಖಿಯ ಚಿಹ್ನೆಯಾಗಿದೆ ಸದಾ ಸಾಗರದ ಆಳದಲ್ಲಿ ಕಳೆದುಹೋಗಿರುವಂತಹ ಗಂಭೀರಮೂರ್ತಿ. ಮನನ ಚಿಂತನೆ ಮಾಡುವಂತಹ

ಚಹರೆ ಹಾಗೂ ನಂತರ ರಮಣೀಕ ಅರ್ಥಾತ್ ಮುಗುಳ್ನಗುತ್ತಿರುವ ಚಹರೆ ಹಾಗಾದರೆ 2 ಲಕ್ಷಣಗಳು ಚಹರೆಯಲ್ಲಿ ಕಾಣಿಸಿತಲ್ಲವೇ ಹೀಗೆ ನಿಮ್ಮ ಚಹರೆಯಲ್ಲೂ ಸಹ ಬ್ರಹ್ಮಾ ತಂದೆಯ ಕಾಪಿ ಸ್ವರೂಪವಾಗಿರಲಿ. ಚಹರೆ ಹಾಗೂ ಚರಿತ್ರೆಯಿಂದ ಬ್ರಹ್ಮಾತಂದೆಯು ಕಾಣಿಸಲಿ, ಏಕೆಂದರೆ ಬ್ರಹ್ಮಾತಂದೆಯ ಸೇವಾಸ್ಥಾನ, ಕರ್ಮಭೂಮಿ ಮನುಬನ ಆಗಿದೆಯಲ್ಲವೇ ಹಾಗಾದರೆ ನೀವು ಮಕ್ಕಳ ಪ್ರತಿ ಇದೇ ಆಸೆ ಇದೆ. ಈಗ ಇಂತಹ ದೀಪಾವಳಿಯನ್ನು ಆಚರಿಸಿ. ಬಾಪ್‌ದಾದಾರವರ ಈ ಒಂದು ಆಸೆಯ ದೀಪಕವನ್ನು ಬೆಳಗಿಸಿ ಯಾವಾಗ ಪ್ರತಿಯೊಬ್ಬರು ಈ ದೀಪವನ್ನು ಬೆಳಗಿಸುತ್ತಾರೆಯೋ ಆಗ ದೀಪಮಾಲೆಯಂತೂ ಆಗಿಯೇ ಬಿಡುತ್ತದೆ. ದೀಪಮಾಲೆಯಲ್ಲೂ ನೋಡಿ ಒಂದು ವೇಳೆ ಮಧ್ಯದ ಒಂದೆರಡು ದೀಪಗಳು ಸಹ ಆರಿ ಹೋಗಿದ್ದರೆ ಚೆನ್ನಾಗಿ ಅನಿಸುತ್ತದೆಯೇ? ಒಂದು ವೇಳೆ ಮಧ್ಯ ಮಧ್ಯದ ಒಂದೆರಡು ದೀಪಕಗಳು ಟಿಮ್ ಟಿಮ್ ಆಗುತ್ತದೆ ಎಂದರೆ ಒಳ್ಳೆಯದು ಅನಸುವುದಿಲ್ಲ. ಆದ್ದರಿಂದ ಸರ್ವ ಬೆಳಗಿರುವ ದೀಪಗಳ ಮಾಲೆಯಾಗಿರಬೇಕು.

ಮಧುಬನ ನಿವಾಸಿಯರು ಎಲ್ಲರೂ ಜಸ್ಟಿಸ್ ಆಗಿರಬೇಕು ಸೆಲ್ಫ್ ಜಸ್ಟಿಸ್. ಯಾವುದೇ ಮಾತು ಆಡುವ ಮೊದಲು ಸ್ವಯಂನ್ನು ಜಡ್ಜ್ ಮಾಡಿ ಆಗ ತನ್ನ ಸಮಯವೂ ವ್ಯರ್ಥವಾಗುದಿಲ್ಲ. ಹಾಗೂ ಅನ್ಯರದ್ದು ಆಗುವುದಿಲ್ಲ. ಮಧುಬನವಂತೂ ಪೀಸ್ ಪ್ಯಾಲೇಸ್ ಆಗಿದೆ. ಮನಸ್ಸಿನಲ್ಲೂ ಪೀಸ್, ಮುಖದಲ್ಲೂ ಪೀಸ್ ಹಾಗಾಗಿ ಮಧುಬನವೆಂಬ ಪೀಸ್ ಪ್ಯಾಲೇಸ್‌ನಿಂದ ಪೀಸ್‌ನ ಕಿರಣಗಳು ಹರಡುತ್ತವೆ. ಈಗ ಪೀಸ್ ಪ್ಯಾಲೇಸ್‌ನವರಿಂದ ಎಲ್ಲರೂ ಪೀಸ್‌ನ ಭಿಕ್ಷೆಯನ್ನು ಬೇಡುತ್ತಾರೆ, ಏಕೆಂದರೆ ಅವರು ಸ್ವಯಂ ಸ್ವಯಂನಿಂದ ದಣಿದಿದ್ದಾರೆ. ವಿನಾಶಕಾರಿಗಳ ಹತ್ತಿರ ಈಗ ಇಲ್ಲಿಯವರೆಗೂ ನಿಮ್ಮ ಶಾಂತಿಯ ಕಿರಣಗಳು ತಲುಪುತ್ತಿಲ್ಲ. ಆದ್ದರಿಂದ ಗೊಂದಲದ ಸ್ಥಿತಿಯಲ್ಲಿ ದ್ದಾರೆ. ಕೆಲವೊಮ್ಮೆ ಶಾಂತ. ಕೆಲವೊಮ್ಮೆ ಅಶಾಂತ ಹಾಗಾದರೆ ಅವರನ್ನು ಶಾಂತ ಮಾಡುವುದಕ್ಕಾಗಿ ಪೀಸ್ ಪ್ಯಾಲೇಸ್‌ನಿಂದ ಶಾಂತಿಯ ಕಿರಣಗಳು ಹೋಗಬೇಕಾಗಿದೆ. ಆಗ ಅವರ ಬುದ್ಧಿಯಲ್ಲಿ ಒಂದೇ ಫೈನಲ್ ನಿರ್ಣಯವಿರುತ್ತದೆ, ಸಮಾಪ್ತಿ ಮಾಡಿಬಿಡೋಣ ಹಾಗೂ ಶಾಂತರಾಗಿ ಶಾಂತಿಧಾಮಕ್ಕೆ ಹೋಗೋಣ. ಹಾಗಾದರೆ ಇಂತಹ ಭಿಕಾರಿಗಳಿಗೆ ಈಗ ಮಹಾದಾನಿಯಾಗಿ ಮಹಾದಾನ ಅಥವಾ ವರದಾನ ಕೊಡುವಂತಹವರಾಗಿ. ಬಾಪ್‌ದಾದಾರವರಂತು ತಿಳಿದುಕೊಳ್ಳುತ್ತಾರೆ ಮಧುಬನದವರು ವಿಶ್ವಕ್ಕೆ ಬಾಪ್ದಾದಾರವರ ಸಮೀಪ ತರುವಂತಹ ಸಮೀಪ ರತ್ನಗಳಾಗಿದ್ದಾರೆ. ಹಾಗಾದರೆ ಈಗ ಇಂತಹ ಸಾಕ್ಷಿಯನ್ನು ತೋರಿಸಿ. ಯಾವಾಗ ಬ್ರಹ್ಮಾತಂದೆಯ ಸಮಾನ ಎಲ್ಲ ಕಾಪಿಗಳು ತಯಾರಿಯಾಗಿ ಹೋಗುತ್ತವೆ ಆಗ ಬೇಹದ್ದಿನ ಗುಂಡುಗಳು ಹೊಡೆಯುತ್ತವೆ. ಪಟಾಕಿಗಳು ಸಿಡಿಯುತ್ತವೆ ಹಾಗೂ ಪಟ್ಟಾಭಿಷೇಕ ಆಗುತ್ತದೆ. ಹಾಗಾದರೆ ಈಗ ಇದರ ತಾರೀಖನ್ನು ಫಿಕ್ಸ್ ಮಾಡಿ. ಯಾವಾಗ ನೀವೆಲ್ಲರೂ ಬ್ರಹ್ಮಾಬಾಬಾರವರ ಪಕ್ಕಾ ಫೋಟೊ ಕಾಪಿಯಾಗುತ್ತೀರೋ ಆಗಲೇ ಈ ಡೇಟ್ ಬರುವುದು. ಮಧುಬನ ನಿವಾಸಿಯವರು ಏನು ಬೇಕಾದರು ಮಾಡಬಹುದು. ಒಳ್ಳೆಯದು ಹಾಗಾದರೆ ಈಗ ಎಲ್ಲರೂ ಏನು ಯೋಚಿಸುತ್ತಿದ್ದೀರಿ.

ಬಾಪ್‌ದಾದಾರವರ ಹತ್ತಿರ ಮನಸ್ಸಿನ ಸಂಕಲ್ಪಗಳ ಕ್ಯಾಮೆರಾ ಇಲ್ಲ ಆದರೆ ಪ್ರತಿಯೊಬ್ಬರ ಮನಸ್ಸಿನಲ್ಲಿ ಏನು ನಡೆಯುತ್ತದೆ ಅದನ್ನೂ ಸಹ ಬಾಪ್‌ದಾದಾರವರು ಸ್ಪಷ್ಟವಾಗಿ ನೋಡಬಲ್ಲರು. ಸೈನ್ಸ್ ನವರಂತೂಇದುವರೆಗೂ ಪ್ರಯತ್ನವನ್ನೇ ಮಾಡುತ್ತಿದ್ದಾರೆ - ಈ ರೀತಿಯ ಕ್ಯಾಮೆರಾ ತಯಾರು ಮಾಡಬೇಕು ಯಾವುದರಿಂದ ಒಳಗಿನ ಸಂಕಲ್ಪಗಳ ರೇಖೆ ತಿಳಿದು ಬರುವುದು. ಅವರು ಪಾಪ ಬಹಳ ಪರಿಶ್ರಮ ಪಡುತ್ತಿದ್ದಾರೆ. ಈ ಎಲ್ಲಾ ಸಂಶೋಧನೆಗಳನ್ನು ಮಾಡುತ್ತಾ-

ಮಾಡುತ್ತಾ ಉಳಿದುಕೊಂಡು ಬಿಡುತ್ತಾರೆ ಮತ್ತು ನೀವು ತಯಾರಿಯಾದ ಸಾಧನಗಳನ್ನು ಕಾರ್ಯದಲ್ಲಿ ತರುವಿರಿ. ಒಳ್ಳೆಯದು.

ರಿವೈಸ್ ಕೋರ್ಸ್ 24-09-1992.

***ಸತ್ಯತೆ ಹಾಗೂ ಅಸತ್ಯತೆಯ ವಿಶೇಷ ಅಂತರ***

ನಾನು ತಂದೆಯವನು ಮತ್ತು ತಂದೆಯು ನನ್ನವರು ಈ ಸ್ಮೃತಿಯು ಸಹಜವೂ ಆಗಿದೆ ಮತ್ತು ಸಮರ್ಥರನ್ನಾಗಿ ಮಾಡುವಂತಹದ್ದಾಗಿದೆ. ಇಂತಹ ಸ್ಮೃತಿ ಸ್ವರೂಪ ಸ್ನೇಹೀ ಮಕ್ಕಳು ಎಂದೂ ಅಸಮರ್ಥರಾಗಲು ಸಾಧ್ಯವಿಲ್ಲ. "ನನ್ನಬಾಬಾ"ನ ಬದುಲು ಅನ್ಯ ನನ್ನತನವು ಬಂದಾಗ ಗೊಂದಲವಾಗುತ್ತದೆ. ಕೇವಲ ತಂದೆಯ ಜೊತೆಗೆ ಇನ್ನೊಂದು ಆಶ್ರಯ ಬೇಕು ಎಂದು ಯೋಚಿಸಬೇಡಿ. ಒಬ್ಬ ತಂದೆಯ ವಿನಃ ಒಂದು ವೇಳೆ ಸಂಕಲ್ಪದಲ್ಲಿಯೂ ಯಾವುದೇ ಆತ್ಮನನ್ನಾಗಲಿ, ಪ್ರಕೃತಿಯ ಸಾಧನವನ್ನಾಗಿ, ಆಶ್ರಯವೆಂದು ಸ್ವೀಕಾರ ಮಾಡಿದರೆ ಈ ಆಟೋಮ್ಯಾಟಿಕ್ ಈಶ್ವರೀಯ ಮಷೀನರಿಯು ಬಹಳ ತೀವ್ರ ಗತಿಯಿಂದ ಕಾರ್ಯ ಮಾಡುತ್ತದೆ ಆ ಸೆಕೆಂಡ್ ನಲ್ಲಿಯೇ ಮನಸ್ಸು, ಬುದ್ಧಿಯು ತಂದೆಯಿಂದ ದೂರವಾಗಿಬಿಡುತ್ತದೆ. ಸತ್ಯತೆಯಿಂದ ದೂರವಾಗುವ ಕಾರಣ ಬುದ್ಧಿಯು ಅಸತ್ಯವನ್ನು ಸತ್ಯವೆಂತಲೂ, ತಪ್ಪನ್ನು ಸರಿ ಅಂತಲೂ ಒಪ್ಪಿಕೊಳ್ಳಲು ಆರಂಭಿಸುತ್ತದೆ. ಯಾರೆಷ್ಟೇ ಇದು ಸರಿ ಇಲ್ಲವೆಂದು ತಿಳಿಸಿದರೂ ತಿದ್ದಲು ಹೋಗುವವರನ್ನು ತಪ್ಪೆಂದು ಸಿದ್ಧ ಮಾಡುವರು. ಡ್ರಾಮಾನುಸಾರ ಇದು ಅಸತ್ಯದ ರಾಜ್ಯವಾಗಿದೆ ಮತ್ತು ಅಸತ್ಯದ ಅಧಿಕಾರಿ ರಾಷ್ಟ್ರಪತಿ ರಾವಣನಾಗಿದ್ದಾನೆ. ಸತ್ಯವನ್ನು ಅಸತ್ಯವೆಂದು ಸಿದ್ಧ ಮಾಡುವುದರಲ್ಲಿ ರಾವಣನ ವಕೀಲರು, ನ್ಯಾಯಾಧೀಶರು, ಮಂತ್ರಿ, ಮಹಾಮಂತ್ರಿಗಳು ಕೂಡ (ಅರ್ಥಾತ್ ನಮ್ಮ ಕರ್ಮೇಂದ್ರಿಯಗಳು) ಬಹಳ ಬುದ್ಧಿವಂತರಾಗಿರುತ್ತಾರೆ. ಅಸತ್ಯಕ್ಕೆ ವಶೀಭೂತ ಆತ್ಮರು ವರ್ತಮಾನ ಸಮಯದ ಅಲ್ಪಕಾಲದ ಸುಖದ ಹೆಸರು, ಸ್ಥಾನಮಾನ, ಗೌರವದ ಸುಖದ ಉಯ್ಯಾಲೆಯಲ್ಲಿ ಭಲೆ ತೂಗಬಹುದು. ಆದರೆ ಅತೀಂದ್ರಿಯ ಸುಖದ ಉಯ್ಯಾಲೆಯಲ್ಲಿ ತೂಗಲು ಸಾಧ್ಯವಿಲ್ಲ ಮತ್ತು ಸರ್ವಾತ್ಮರ ಹೃದಯದ, ಸ್ನೇಹದ ಹೃದಯದ ಆಶೀರ್ವಾದಗಳ ಮಾನ್ಯತೆಯನ್ನು ಪ್ರಾಪ್ತಿ ಮಾಡಿಕೊಳ್ಳಲು ಸಾಧ್ಯವಿಲ್ಲ. ತೋರ್ಪಡಿಕೆಯ ಮಾನ್ಯತೆಯನ್ನು ಪಡೆಯಬಹುದು, ತಂದೆಯ ಹೃದಯ ಸಿಂಹಾಸನಾಧಿಕಾರದ ಕೀರ್ತಿಯನ್ನು ಅನುಭವ ಮಾಡಲು ಸಾಧ್ಯವಿಲ್ಲ. ತಮಗೆ ತಾವು ಚೆಕ್ಕರ್ (ಪರಿಶೀಲಿಸಿಕೊಳ್ಳುವುದು) ಆಗಿರಿ ಮತ್ತು ಅನ್ಯರಿಗೆ ಮೇಕರ್ ಆಗಿರಿ. ಎಂದು ತಿಳಿಸುತ್ತಾ ಶಿವಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಜ್ಞಾನ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. "ನಾನು ತಂದೆಯವನು ಮತ್ತು ತಂದೆಯು ನನ್ನವರು" ಎಂಬ ಸ್ಮೃತಿಯನ್ನು ಸಹಜ ಮತ್ತು ಸದಾ ಇಟ್ಟುಕೊಂಡು ಸಮರ್ಥವಾಗಿ ತಯಾರಾಗಿದ್ದೇನೆ.

2. ನಾನು ಮನಸ್ಸು, ಬುದ್ಧಿಯಿಂದ ನನಗೆ ಒಬ್ಬ ತಂದೆಯ ಹೊರತು ಮತ್ತಾರು ಇಲ್ಲ ಎಂಬ ಸತ್ಯತೆಯ ಶಕ್ತಿಯಿಂದ ಮತ್ತು ಸರ್ವಪ್ರಾಪ್ತಿಗಳ ಅಧಿಕಾರದಿಂದ ಸಂಪನ್ನವಾಗಿ ಇದ್ದೇನೆ.

3. ನಾನು ಅತೀಂದ್ರಿಯ ಸುಖದ ಉಯ್ಯಾಲೆಯಲ್ಲಿ ತೂಗುತ್ತಾ ತಂದೆಯ ಹೃದಯ ಸಿಂಹಾಸನದ ಕೀರ್ತಿಯನ್ನು ಅನುಭವ ಮಾಡಿಕೊಳ್ಳುತ್ತಿದ್ದೇನೆ.

4. ನನಗೆ ನಾನು ಚೆಕ್ಕರಾಗಿ ಅನ್ಯರಿಗೆ ಮೇಕರ್ ಆಗಿದ್ದೇನೆ.